## ವೃಕ್ಷಮಾತೆಯ ಮೌಲ್ಯಯುತ ಮಾತು

‘ಮಕ್ಕಳಿಗೆಲ್ಲ ಗಿಡ ನೆಟ್ಟು ಬೆಳ್ಸದ ಕಲಿಸಬೇಕು...’ (ಕೃಷ್ಣಿ ಶಿರೂರ, ಜ. 13) ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ತುಳಸಿ ಗೌಡ ಸಂದರ್ಶನ ಪ್ರಕಟಿಸಿದ್ದಕ್ಕೆ ಅಭಿನಂದನೆಗಳು. ಮೊದಲು ಮಾತೆ ತುಳಸಿ ಅಜ್ಜಿಗೆ ಸಾಷ್ಟಾಂಗ ನಮಸ್ಕಾರ. ಅವರ ಸಾಧನೆ, ವೃಕ್ಷ ಪ್ರೇಮ ನಮಗೆಲ್ಲ ಒಂದು ಮಾದರಿ. ಅವರಂತೆ ನಾವೂ ಗಿಡ ಮರ ಬೆಳೆಸಿ, ಪರಿಸರ ಉಳಿಸೋಣ. ತುಳಸಿ ಗೌಡರಿಗೆ ಇನ್ನೂ ಹೆಚ್ಚಿನ ಪ್ರಶಸ್ತಿಗಳು ಲಭಿಸಲಿ ಎಂದು ಹಾರೈಕೆ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

## ಚುಕ್ಕಿ ಚುಕ್ಕಿ ಅಭಿಮಾನ ಉಕ್ಕಿ

‘ಚುಕ್ಕಿ ಚುಕ್ಕಿ ಅಭಿಮಾನ ಉಕ್ಕಿ’ (ಈರಣ್ಣ ಬೆಂಗಾಲಿ, ಜ. 6) ಲೇಖನದಲ್ಲಿ ಪ್ರಕಟಗೊಂಡ ಡಾ. ರಾಜ್ ಚುಕ್ಕಿ ಚಿತ್ರಗಳು ನೈಜತೆಗೆ ಬಹಳ ಹತ್ತಿರವಿದ್ದವು. ಕಲಾವಿದ ಮ್ಯಾದಾರ್ ಆಯ್ದುಕೊಂಡ ವಿಭಿನ್ನ ಮಾಧ್ಯಮ ಕಷ್ಟಕರವಾಗಿದ್ದು ಮತ್ತು ತಾಳ್ಮೆಯನ್ನು ಪರೀಕ್ಷಿಸುವಂತದ್ದಾಗಿದೆ. ಕಲಾವಿದರ ಕೈಚಳಕದಲ್ಲಿ ರಾಜ್ ಅವರ ನೂರಕ್ಕೂ ಹೆಚ್ಚು ಚುಕ್ಕಿ ಚಿತ್ರಗಳು ಮೂಡಿ ಬಂದಿರುವುದು ಅಚ್ಚರಿ ಮೂಡಿಸಿತು. ಈ ವಾರದ ‘ಸುಧಾ’ ಪತ್ರಿಕೆ ರಾಜ್ ಅಭಿಮಾನಿಗಳ ಸಂಗ್ರಾಹ್ಯ ಸಂಚಿಕೆಯಾಗುವುದರಲ್ಲಿ ಸಂಶಯವಿಲ್ಲ.

—ಜಿ. ನಾಗೇಂದ್ರ ಕಾವೂರು, ಸಂಡೂರು

ಲೇಖನ ರಾಯಚೂರಿನ ಎಚ್.ಎಲ್. ಮ್ಯಾದಾರ್ ಅವರ ವಿಶಿಷ್ಟ ಪ್ರತಿಭೆಯನ್ನು ಪರಿಚಯಿಸಿದೆ. ಇದು ಬೆರಗುಗೊಳಿಸುವ ಸಾಧನೆ. ಇವುಗಳು ಚುಕ್ಕಿ ಚಿತ್ರಗಳು ಎಂದು ಅನಿಸುವುದೇ ಇಲ್ಲ. ಛಾಯಾಚಿತ್ರಗಳಂತೆ ಜೀವಂತವಾಗಿ ಕಾಣುತ್ತಿವೆ. ರಾಜ್‌ಕುಮಾರ್ ಅವರ ಹಳೆಯ ಮೌಲಿಕ ಸಿನಿಮಾಗಳು ನೆನಪಾಗಿ ಮನಸ್ಸು ಅರಳಿತು.

—ರಮೇಶ್ ರಾವ್, ಕೈಕಂಬ

## ಕಿಂಡರ್ ಕಥಾ

ಬೆಂಗಳೂರಿನ ಗೋಥೆ ಇನ್‌ಸ್ಟಿಟ್ಯೂಟ್ ‘ಕಿಂಡರ್ ಕಥಾ’ ಯೋಜನೆಯಡಿ ನವಕರ್ನಾಟಕ ಪ್ರಕಾಶನದ ಸಹಯೋಗದೊಂದಿಗೆ ಕನ್ನಡದಲ್ಲಿ ಮಕ್ಕಳ ಸಚಿತ್ರ ಪುಸ್ತಕಗಳನ್ನು ಹೊರತರಲು ಉದ್ದೇಶಿಸಿದೆ. ಈ ಸಂಬಂಧವಾಗಿ ಲೇಖಕರಿಂದ ಮತ್ತು ಚಿತ್ರಕಾರರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಉದ್ದೇಶಿತ ಕೃತಿಯ ವಿವರಗಳು, ಬರಹ ಹಾಗೂ ಚಿತ್ರಗಳನ್ನು kinderkathabangalore@goethe.de ವಿಳಾಸಕ್ಕೆ ಕಳಿಸಿಕೊಡಬಹುದು.

ಕೊನೆಯ ದಿನಾಂಕ: ಜ. 31.

ಮಾಹಿತಿಗಾಗಿ: www.goethe.de/bangalore

## ಹೊಸ ವರ್ಷದ ಸಂಭ್ರಮ!




‘2022 ಓನ್ಲಿ ಖುಷಿ... ಬೇರೇನಿಲ್ಲ’ (ಕಾವ್ಯಾ ಕಡಮೆ – ಮಹತಿ, ಜ.6) ಹೊಸ ವರ್ಷದ ಸಂಚಿಕೆ ತುಂಬ ಚೆನ್ನಾಗಿದೆ. ‘ಪ್ರಿಯ ಹೊಸ ವರುಷವೇ...’ ಹಾಗೂ ‘ಮೂರೇ ಮೂರು ಮಾತು!’ ಪತ್ರಗಳು ಇಷ್ಟವಾದವು.

2021ರ ವರ್ಷದಲ್ಲಿ ಸಿಹಿಗಿಂತ ಕಹಿ ಘಟನೆಗಳದ್ದೇ ಪಾರುಪತ್ಯವಾಗಿತ್ತು. ಕೊರೊನಾ ಆರ್ಭಟ, ದೇಶದಾದ್ಯಂತ ರೈತರ ದೀರ್ಘ ಕಾಲದ ಮುಷ್ಕರ, ಹವಾಮಾನ ವೈಪರೀತ್ಯದಿಂದ ಸಂಭವಿಸಿದ ಚಂಡಮಾರುತಗಳು, ಆರ್ಥಿಕ ವಲಯಗಳಲ್ಲಿ ತೀರಾ ಏರುಪೇರು, ಕೆಲಸ ಕಳೆದುಕೊಂಡ ಅದೆಷ್ಟೋ ಜನರು, ಚಂದನವನದಿಂದ ಕಳಚಿ ಬಿದ್ದ ಅಮೂಲ್ಯ ನಕ್ಷತ್ರಗಳು —ಹೀಗೆ ಪಟ್ಟಿ ಬೆಳೆದು 2021ರ ಭಯಾನಕ ದೃಶ್ಯಗಳು ಮರೆಯಾಗುತ್ತಿದೆ. 2022ರ ನೂತನ ವರ್ಷದಲ್ಲಾದರೂ ಜಗತ್ತಿನಲ್ಲಿ ಶಾಂತಿ, ನೆಮ್ಮದಿ, ಆರೋಗ್ಯಕರ ವಾತಾವರಣ ರೂಪುಗೊಳ್ಳಲಿ.

—ಬೆಂ. ಮು. ಮಾರುತಿ, ಬೆಂಗಳೂರು

## ಅಮೀನಗಡದ ನಂಟಿನ ಕರದಂಟು

‘ಅಮೀನಗಡದ ನಂಟಿನ ಕರದಂಟು’ (ಸೋಮಲಿಂಗ ಬೇಡರ, ಜ. 6) ಲೇಖನ ರುಚಿಯಾಗಿತ್ತು. ಹೊಸವರ್ಷದ ದಿನದಂದು ಸಿಹಿ ಎಲ್ಲರಿಗೂ ತಿನಿಸಿದಂತೆ ಇತ್ತು. ದಿನೇಶ್ ಮಾನೀರ್ ಅವರ ಚಿತ್ರಪಟ ಕಥನದಲ್ಲಿನ ಸಿದ್ಧಾರೂಢ ಮಠದ ದೀಪೋತ್ಸವ ಮತ್ತು ಇನ್ನೂ ಅನೇಕ ದೇವರ ಜಾತ್ರೆ ಚಿತ್ರಪಟಗಳ ರಸದೌತಣ ಉಣಬಡಿಸಿದಂತಾಗಿದೆ.

—ಬಿ. ಎಸ್. ಮುಳ್ಳೂರ, ಹಲಗತ್ತಿ

ಕರದಂಟಿನ ಲೇಖನ ಓದುತ್ತಾ ಇದ್ದಂತೆ ನನಗೆ ಜಾಲಿ ಗಿಡದ ಅಂಟಿನ ಜೊತೆಗೆ ಅದರಲ್ಲಿ ಬಿಡುವ ಹಳದಿ ಸುವಾಸನಾಭರಿತ ಪುಷ್ಪ (ಗೊಬ್ಬಳಿ ಹೂವು) ಜ್ಞಾಪಕಕ್ಕೆ ಬಂದಿತು. ನಾವು ಸಣ್ಣ ಪ್ರಾಯದಲ್ಲಿ ಅಮ್ಮ ಮಲ್ಲಿಗೆ, ಮರುಗದ ಜೊತೆಗೆ ಗೊಬ್ಬಳಿಹೂವನ್ನು ಸೇರಿಸಿ ಕಟ್ಟಿಕೊಡುತ್ತಿದ್ದ ಮಾಲೆಯನ್ನು ಮುಡಿಯುತ್ತಿದ್ದೆವು. ಹುಡುಗಿಯರು ಪ್ರಾಯಕ್ಕೆ ಬಂದಾಗಲೂ, ಬಾಣಂತಿಯರಿಗೂ, ಅಂಟನುಂಡೆಯ ಸಮಾರಾಧನೆ ನಡೆಯುತ್ತಿತ್ತು. ವಯಸ್ಸಾಗುತ್ತಾ ಬಂದಂತೆ ಬೆನ್ನುಮೂಳೆಯು ಗಟ್ಟಿಯಾಗಿ ಇರಲಿ ಅನ್ನುವ ಉದ್ದೇಶದಿಂದ ಹಿಂದಿನವರು ಬಳಸುತ್ತಿದ್ದುದು.

—ಶ್ಯಾಮಲಾ ಸತ್ಯ, ಬೆಂಗಳೂರು

## ರೋಲ್ ಮಾಡೆಲ್ ಯಾರು?

‘ಸಣ್ಣತನ–ಪೂರ್ವಗ್ರಹಗಳನ್ನು ಮೀರೋಣ...’ (ಎನ್. ಉದಯಕುಮಾರ್, ಜ.6) ಲೇಖನ ಅರ್ಥಪೂರ್ಣವಾಗಿದೆ. ಎಲ್ಲಾ ಪಕ್ಷಗಳ ರಾಜಕಾರಣಿಗಳು ಬೇರೊಬ್ಬರ ಮೇಲೆ ಕೆಸರೆರಚಾಟದಲ್ಲಿ ತಲ್ಲೀನರಾಗಿದ್ದಾರೆ. ತಮ್ಮ ಜವಾಬ್ದಾರಿ, ಕರ್ತವ್ಯ ಮರೆತು ಅಧಿಕಾರ, ಹಣಕ್ಕಾಗಿ ಹಾತೊರೆಯುತ್ತಿದ್ದಾರೆ. ಹೊಗಳು ಭಟರಿಂದ ಸುತ್ತುವರೆಯಲ್ಪಟ್ಟು ತಾವೇ ದೇಶದ ನಾಯಕರೆಂದು ಬೀಗುತ್ತಿರುವ ಇವರೆಲ್ಲರೂ ಯಾರಿಗೆ ರೋಲ್ ಮಾಡೆಲ್ ಆಗಲು ಸಾಧ್ಯ?

—ಸಿ.ಎನ್. ಮುಕ್ತಾ, ಮೈಸೂರು

## ಕತ್ತೆ ಪುರಾಣ!

‘ಕತ್ತೆ ಹಾಲು ಹಿಂಡಿದ್ರೆ ಸಿಗೋ ಬೆಲೆ ಕುದುರೆ ಬಾಲ ಹಿಡಿದ್ರೆ ಸಿಗುತ್ತಾ?’ (ವಸುಂಧರಾ ಕದಲೂರು ಜ. 6) ನಗೆಲೇಖನ ಚೆನ್ನಾಗಿದೆ. ಕತ್ತೆ ಎಂಬ ಪ್ರಾಣಿ ಏನೆಲ್ಲಾ ಚಾಕರಿ ಮಾಡಿದರೂ ಕೆಲವು ಕೆಲಸಗಳನ್ನು ಕತ್ತೆಗೆ ಹೋಲಿಕೆ ಮಾಡಿ ‘ಕತ್ತೆಬಾಲ ಕುದುರೆ ಜುಟ್ಟು’ ಎನ್ನುವುದು, ನಿಷ್ಪ್ರಯೋಜಕರಿಗೆ ಹೋಗಿ ‘ಕತ್ತೆ ಮೇಯಿಸು’ ಎನ್ನುವುದು, ‘ರಾಯರ ಕುದುರೆ ಬರ್ತಾ ಬರ್ತಾ ಕತ್ತೆ ಆಯ್ತು’ ಎನ್ನುವುದು ಇದ್ದೇ ಇದೆ. ಸೋಮಾರಿಗಳಿಗೆ ಮರ್ಯಾದಸ್ಥ ಪ್ರಾಣಿ ಕತ್ತೆಯನ್ನು ಹೋಲಿಸುತ್ತಾರಲ್ಲ? ಇದು ಅದಕ್ಕೆ ಅವಮಾನವಲ್ಲವೇ? ಇದು ನ್ಯಾಯವೇ?

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

## ಟ್ರಾಲಿ

‘ಟ್ರಾಲಿ’ (ನಾ. ಡಿಸೋಜ ಜ. 6) ಕಥೆ ಓದುತ್ತಾ ನನ್ನ ಬಾಲ್ಯದಲ್ಲಿ ನೋಡಿದ ರಾಮ – ರಹೀಮ್ ಓಡಾಡಿದ ನೆನಪು ಹಾಗೆ ಕಣ್ಣ ಮುಂದೆ ತೇಲಿ ಬಂತು. ಹೆಸರಿನ ಹಿಂದಿನ ವಿವರಣೆ ಓದಿ ಪುಳಕಿತಳಾದೆ.

—ಶೀಲಾ, ಬೆಂಗಳೂರು

## ‘ವೇಸರ ಶೈಲಿ’ ಬಳಕೆ ಸರಿಯಲ್ಲ

‘ವೇಸರ ಶೈಲಿಯ ಭಗ್ನ ಗಣಪ’ (ಟಿ.ಎಸ್. ಪ್ರತಿಭಾ, ಜ. 13) ಬರಹದಲ್ಲಿ ಲೇಖಕಿ ಚಿತ್ರದುರ್ಗದ ಮುರುಘಾಮಠದ ವಸ್ತುಸಂಗ್ರಹಾಲಯದಲ್ಲಿನ ಗಣಪನ ಮೂರ್ತಿಯ ಬಗ್ಗೆ ಚಿತ್ರದುರ್ಗದ ಪರಿಚಯಿಸಿರುವುದು ಸ್ವಾಗತಾರ್ಹ. ಆದರೆ, ಅದು ದ್ರಾವಿಡ ಮತ್ತು ನಾಗರ ಶೈಲಿಗಳ ಸಮ್ಮಿಶ್ರಣವಾದ ವೇಸರ ಶೈಲಿಯದು ಎಂದು ಹೇಳಿರುವುದು ಮಾತ್ರ ಸುಸಂಗತವಲ್ಲ. ಏಕೆಂದರೆ, ದ್ರಾವಿಡ, ನಾಗರ, ವೇಸರ ಎಂಬವು ಕಟ್ಟಡ ರಚನೆಯ (ಆರ್ಕಿಟೆಕ್ಚರ್) ಶೈಲಿಗೆ ಸಂಬಂಧಿಸಿದ ಶಬ್ದಗಳೇ ಹೊರತು ಮೂರ್ತಿಶಿಲ್ಪಕ್ಕೆ (ಸ್ಕಲ್ಪ್ಚರ್) ಸಂಬಂಧಿಸಿದ ಶಬ್ದಗಳಲ್ಲ. ಹಾಗೇ ಅದು ‘ಕಲ್ಯಾಣಿ ಚಾಲುಕ್ಯ’ ಅಲ್ಲ, ‘ಕಲ್ಯಾಣ ಚಾಲುಕ್ಯ’ ಅಷ್ಟೆ.

—ಬಿ. ರಾಜಶೇಖರಪ್ಪ, ಚಿತ್ರದುರ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in